# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1054 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 20-08-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಂಗಳೂರಿಂದ ತುಮಕೂರಿಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಯಾವುದು; ಅದು ಎಷ್ಟು ಕಿಲೋಮೀಟರ್ ಇದೆ; ರಸ್ತೆಯನ್ನು (ಹೆದ್ದಾರಿ) ಅಗಲೀಕರಣ ಮಾಡುವ ಸಾಧ್ಯತೆ ಇದೆಯೆ; | ರಾಷ್ಟ್ರೀಯ ಹೆದ್ದಾರಿ-48 ರ (ಹಳೆಯ ರಾಷ್ಟ್ರೀಯ ಹೆದ್ದಾರಿ-4) ಬೆಂಗಳೂರು-ತುಮಕೂರಿಗೆ ಸಂಪರ್ಕಿಸುವ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರು ಇವರ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>ಬೆಂಗಳೂರಿನಿಂದ ನೆಲಮಂಗಲದ ಭಾಗದ ಕಿ.ಮೀ. 10.00 ರಿಂದ 29.50ರ ವರೆಗೆ ಒಟ್ಟು 19.50 ಕಿ.ಮೀ. ಉದ್ದದ ರಸ್ತೆಯು ಯೋಜನಾ ಅನುಷ್ಠಾನ ಘಟಕ, ಬೆಂಗಳೂರು ವ್ಯಾಪ್ತಿಗೆ ಒಳಪಡುತ್ತದೆ.<br><br>ನೆಲಮಂಗಲ-ತುಮಕೂರು (ಕುಲುಮೆ ಪಾಳ್ಯ ಮತ್ತು ಕ್ಯಾತಸಂದ್ರ ಪ್ಲಾಜಾ) ಭಾಗದ ಕಿ.ಮೀ. 31.00 ರಿಂದ 61.450 ವರೆಗೆ ಒಟ್ಟು 30.450 ಕಿ.ಮೀ. ಉದ್ದದ ರಸ್ತೆಯು ಯೋಜನಾ ಅನುಷ್ಠಾನ ಘಟಕ, ತುಮಕೂರು ವ್ಯಾಪ್ತಿಗೆ ಒಳಪಟ್ಟಿದ್ದು, ಅಗಲೀಕರಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| ಆ) | ಈ ಹೆದ್ದಾರಿಯನ್ನು ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು; ಇದು ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ; (ವಿವರವಾದ ಮಾಹಿತಿ ನೀಡುವುದು) | ಈ ಹೆದ್ದಾರಿಯ, ಬೆಂಗಳೂರು - ನೆಲಮಂಗಲ (ಪಾರ್ಲೆಜಿ ಪ್ಲಾಜಾದ ವರೆಗೆ) ಭಾಗದ ಯೋಜನೆಯನ್ನು ಮೆ: ನವಯುಗ ಬೆಂಗಳೂರು ಟೋಲ್ ವೇಸ್, ಪ್ರೈವೇಟ್ ಲಿಮಿಟೆಡ್ ಇವರಿಗೆ ವಹಿಸಲಾಗಿದ್ದು, ದಿನಾಂಕ: 09.05.2007 ರ ಕರಾರಿನಂತೆ ದಿನಾಂಕ: 04.11.2027ರ ವರೆಗೆ ರಿಯಾಯಿತಿ ಕಾಮಗಾರಿಯು ಪೂರ್ಣಗೊಳ್ಳಬೇಕಾಗಿರುತ್ತದೆ.<br><br>ಆದರೆ ರಿಯಾಯಿತಿ ಗುತ್ತಿಗೆದಾರರು ದಿನಾಂಕ: 21.02.2021 ರಂದು ಸದರಿ ಒಪ್ಪಂದವನ್ನು ರದ್ದುಗೊಳಿಸಿದ್ದು, ತದನಂತರ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರೇ ಈ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಂಡಿರುತ್ತಾರೆ.<br><br>ನೆಲಮಂಗಲ - ತುಮಕೂರು (ಕುಲುಮೆ ಪಾಳ್ಯ ಮತ್ತು ಕ್ಯಾತಸಂದ್ರ ಪ್ಲಾಜ) ಭಾಗದ ಯೋಜನೆಯನ್ನು ಮೆ:: ಜೆ.ಎ.ಎಸ್. ಟೋಲ್‌ವೇಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ವಹಿಸಲಾಗಿದ್ದು, ದಿನಾಂಕ:09.02.2004 ರಿಂದ 07.11.2022ರ ವರೆಗೆ ರಿಯಾಯಿತಿ ಕರಾರು ಒಪ್ಪಂದಕ್ಕೆ ಸಹಿ ಹಾಕಲಾಗಿರುತ್ತದೆ. ದಿನಾಂಕ: 06.11.2022 ರಂದು ಸದರಿ ಒಪ್ಪಂದವನ್ನು ರದ್ದುಗೊಳಿಸಿದ್ದು, ತದನಂತರ ಭಾರತೀಯ |

| | | |
|---|---|---|
| | | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರೇ ಈ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಂಡಿರುತ್ತಾರೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುತ್ತಾರೆ. |
| ಇ) | ಸದರಿ ರಸ್ತೆಯ ನಿರ್ವಹಣೆ ಸಂಸ್ಥೆಯ ಒಡಂಬಡಿಕೆ ಅವಧಿಯು ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ರಸ್ತೆಯನ್ನು ಟೋಲ್ ಮುಕ್ತ ರಸ್ತೆಯನ್ನಾಗಿ ಮಾಡದೆ ಸಂಸ್ಥೆಯೇ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನ್ಯಾಯ ಸಮ್ಮತವೇ; | GSR 725(E), dated 06.10.2023 ರ ಗೆಜೆಟ್ ನೋಟಿಫಿಕೇಷ್ Clause 2(ಬಿ) ರಂತೆ, (ಪ್ರತಿ ಲಗತ್ತಿಸಿದೆ) "ರಿಯಾಯಿತಿ ಒಪ್ಪಂದದಲ್ಲಿ ಸೂಚಿಸಲಾದ ಶುಲ್ಕವು ರಿಯಾಯಿತಿ ಅವಧಿಯ ಅಂತ್ಯದವರೆಗೆ ಮತ್ತು ರಿಯಾಯಿತಿ ಅವಧಿ ಮುಗಿದ ನಂತರವು ಕೇಂದ್ರ ಸರ್ಕಾರವು (Executing Authority) ಟೋಲ್ ಶುಲ್ಕವನ್ನು ಸಂಗ್ರಹಿಸುತ್ತದೆ. |
| ಈ) | ಹಾಗಿದ್ದಲ್ಲಿ ಸರ್ಕಾರವು ಇದರ ಸಂಬಂಧ ಇಲ್ಲಿಯವರೆಗೂ ನಡೆಸಿರುವ ಪತ್ರ ವ್ಯವಹಾರಗಳ ಯಥಾ ಪ್ರತಿಗಳನ್ನು ನೀಡುವುದು; | |
| ಉ) | ಒಂದು ದಿನಕ್ಕೆ ಸರಾಸರಿ ನೆಲಮಂಗಲ ಟೋಲ್ ಮತ್ತು ಕ್ಯಾತ್ಸಂದ್ರ ಟೋಲ್‌ನಲ್ಲಿ ಎಷ್ಟು ಶುಲ್ಕ ಸಂಗ್ರಹವಾಗುತ್ತಿದೆ. ಈ ಹಣವನ್ನು ಯಾವ ಖಾತೆಯಲ್ಲಿ ಇಡಲಾಗಿದೆ; ಇದಕ್ಕೆ ಜವಾಬ್ದಾರರಾರು? (ವಿವರವಾದ ಮಾಹಿತಿ ನೀಡುವುದು) | ಬೆಂಗಳೂರು – ನೆಲಮಂಗಲ ಟೋಲ್ ಪ್ಲಾಜಾದ ಸರಾಸರಿ ದೈನಂದಿನ ಟೋಲ್ ಸಂಗ್ರಹ ರೂ.29.91 ಲಕ್ಷಗಳು ಮತ್ತು ನೆಲಮಂಗಲ – ತುಮಕೂರು ವಿಭಾಗದ (ಕುಲುಮೇಪಾಳ್ಯ ಮತ್ತು ಕ್ಯಾತಸಂದ್ರ) ಟೋಲ್ ಪ್ಲಾಜಾದ ಸರಾಸರಿ ದೈನಂದಿನ ಟೋಲ್ ಸಂಗ್ರಹ ರೂ. 18.00 ಲಕ್ಷಗಳು.<br><br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಧಾನ ಕಚೇರಿಯಿಂದ ನೇಮಿಸಪ್ಪಟ್ಟ ಏಜೆನ್ಸಿಗಳು ಟೋಲ್ ಸಂಗ್ರಹಿಸುತ್ತಿದೆ. ಸದರಿ ಏಜೆನ್ಸಿ ರವರು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಟೋಲ್ ಖಾತೆಗೆ ಸ್ಥಿರ ದೈನಂದಿನ / ಸಾಪ್ತಾಹಿಕ ಪಾವತಿಯನ್ನು ಜಮಾ ಮಾಡುತ್ತಿದ್ದು, ಅದನ್ನು ಒಟ್ಟಾರೆಯಾಗಿ ಸಂಗ್ರಹಿಸುತ್ತಿದ್ದ ಏಕೀಕೃತ ನಿಧಿಗೆ ವರ್ಗಾಯಿಸಲಾಗುತ್ತದೆ. |

ಸಂಖ್ಯೆ: ಲೋಇ 330 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು